ಎಷ್ಟೊಂದು ವರ್ಷಗಳು ಕಳೆದು ಹೋದವು!

ಆಡಾಡ್ತಾ ಆಯುಷ್ಯ ಎಂದು ಅದಕ್ಕೇ ಅನ್ನುತ್ತಾರಲ್ಲವೇ!

ಸಮುದ್ರದ ಭರತದ ಏಳುಬೀಳುಗಳು, ಹಾಗೂ ಸಮಯ ಯಾರಿಗೂ ಕಾಯುವುದಿಲ್ಲ. ಈ ಕಾಲಾವಧಿಯ ಪ್ರವಾಹದಲ್ಲಿ ನೆನಪುಗಳು ಅಸ್ಪಷ್ಟವಾಗಿ, ಮಸಕಾಗುತ್ತಿದ್ದಂತೆಯೇ, 'ಸುಶೀಲಾ ಇನ್ನಿಲ್ಲ' ಈ ವಾಕ್ಯ ಓದಿದಾಗ ರಘುವಿನ ಎದೆಯಲ್ಲಿ ಹರಿತವಾದ ಚೂರಿಯಿಂದ ತಿವಿದಂತೆ ಆಯಿತು. ಆಗಿದ್ದ ಗಾಯವನ್ನು ಕೆದರಿ ಮತ್ತಿಷ್ಟು ದೊಡ್ಡದನ್ನಾಗಿ ಮಾಡಿತು. ತಡೆದುಕೊಳ್ಳಲಾರದಂತಹ ನೋವು ಸುರು ಆಯಿತು.

ಹಾಗೆ ನೋಡಿದರೆ, ಇದರಲ್ಲಿ ತಪ್ಪು ಯಾರದೂ ಇರಲಿಲ್ಲ... ನಿಸರ್ಗ ತನ್ನ ನಿಯಮದಂತೆ ತನ್ನ ಕಾರ್ಯವನ್ನು ನಿಭಾಯಿಸಿತ್ತು. ಅರಿತೋ, ಇಲ್ಲವೇ ಅರಿಯಲಾರದೆಯೋ ಹದಿ ಹರಯದಲ್ಲಿ ನಡೆದ ಈ ಕ್ರಿಯೆ, ರಘುವಿಗೆ ತಾನು ಪುರುಷನಿದ್ದೇನೆ ಎಂಬ ಆತ್ಮವಿಶ್ವಾಸವನ್ನು ತಂದು ಕೊಟ್ಟಿತು. ಈ ಘಟನೆ ಮಾತ್ರ ಆತನ ಜೀವನಕ್ಕೆ ಹೊಸ ತಿರುವು ಕೊಟ್ಟರೆ, ಇದಕ್ಕೆ ವ್ಯತಿರಿಕ್ತವಾಗಿ ಸುಶೀಲೆಯ ಆಯುಷ್ಯದ ಎಲ್ಲ ಬಾಗಿಲುಗಳನ್ನು ಮುಚ್ಚುವ ಹಾಗೆ ಮಾಡಿತು.

ಇದಾದ ಅನಂತರ ದಾದಾ, ಅತ್ತೆಯನ್ನು ಎಂದಿಗೂ ಹೊರಗೆ ಬಿಡಲಿಲ್ಲ. ಜನರ ಸಂಪರ್ಕಕ್ಕೆ ಅವಕಾಶವನ್ನೂ ಕೊಡಲಿಲ್ಲ. ಅಲೌಕಿಕ ಸುಂದರಿಯೋರ್ವಳ ಆಯುಷ್ಯ ಬಾಡಿ, ಸೊರಗಿ ತನ್ನಷ್ಟಕ್ಕೆ ತಾನೇ ಕಮರಿ ಹೋಯಿತು. 'ಇದಕ್ಕೆ ಹೊಣೆ ಯಾರು?' ಈ ಪ್ರಶ್ನೆ ತಲೆಯಲ್ಲಿ ಕ್ರಿಮಿಯಂತೆ ಕಾಡುತ್ತಲೇ ಇರುತ್ತದೆ. ಬಹುಶಃ ಕಾಲವೇ ಈ ಸಮಸ್ಯೆಯನ್ನು ಪರಿಹರಿಸಬಹುದು. ಯಾಕೆಂದರೆ, ಅದು ಸರ್ವಶಕ್ತಿ ಉಳ್ಳದ್ದಾಗಿದೆ.

★★★

"ಯಾರು ಈ ಸುಶೀಲಾ?"

ರಘುನ ಹೆಂಡತಿಯ ಹಣೆಯ ಮೇಲೆ ಪ್ರಶ್ನಾರ್ಥಕ ನೆರಿಗೆಗಳು ಕಾಣಿಸಿಕೊಂಡವು.

"ಆಕೆ ನನ್ನ ಸೋದರತ್ತೆ ಆಗಿದ್ದಳು..."

ಗದ್ಗದಿತ ಕಂಠದಿಂದ ರಘು ನುಡಿದ ಹಾಗೂ ಬೆನ್ನು ತಿರುಗಿಸಿ ಹೊರಟು ಹೋದ.

## ಡಾ. ಸೋನಾಲಿ ಲೋಹಾರ

ಶ್ರವಣ–ಶ್ರಾವ್ಯ–ವಾಕ್ ಚಿಕಿತ್ಸಕರು. ಕಳೆದ ಇಪ್ಪತ್ತೈದು ವರ್ಷಗಳಿಂದ ಈ ವೃತ್ತಿಯಲ್ಲಿರುವ ಲೇಖಕಿ ಮಹಾರಾಷ್ಟ್ರದ ಠಾಣೆಯಲ್ಲಿ ನೆಲೆಸಿದ್ದಾರೆ. ಬಾಲಿವುಡ್ ಕಲಾವಿದರಿಗೆ ಹಾಗೂ ಸಂಗೀತಗಾರರಿಗೆ ಧ್ವನಿ ತರಬೇತಿಯನ್ನು ನೀಡುತ್ತಾರೆ; ಪತ್ರಿಕೆಗಳಿಗೆ ಅಂಕಣಗಳನ್ನು ಬರೆಯುತ್ತಾರೆ. ಸುಮಾರು 50 ಕಥೆಗಳನ್ನು ಬರೆದಿರುವ ಅವರ ಎರಡು ಕಥಾಸಂಗ್ರಹಗಳು ಪ್ರಕಟವಾಗಿವೆ.

## ಪ್ರಕಾಶ ಪರ್ವತೀಕರ

ಮೂಲತಃ ಬಾಗಲಕೋಟೆಯವರು. ಮರಾಠಿ, ಹಿಂದಿ ಹಾಗೂ ಇಂಗ್ಲಿಷ್ ಭಾಷೆಗಳಿಂದ ಸಾಹಿತ್ಯ ಕೃತಿಗಳನ್ನು ಅನುವಾದಿಸುತ್ತಾರೆ. ಸಿವಿಲ್ ಎಂಜಿನಿಯರ್ ಆಗಿರುವ ಅವರು ಕನ್ನಡದಲ್ಲಿ ಏಳು ಭಾಷಾಂತರ ಕೃತಿಗಳನ್ನು ಪ್ರಕಟಿಸಿದ್ದಾರೆ. 70ಕ್ಕೂ ಹೆಚ್ಚು ಅನುವಾದಿತ ಕತೆಗಳು ಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ. ಪ್ರಸ್ತುತ ತಮಿಳುನಾಡಿನ ತಿರುಪ್ಪೂರನಲ್ಲಿ ನೆಲೆಸಿದ್ದಾರೆ.